ಇ) ದೀನ್‌ದಯಾಳ್ ಹಾರ್ಟ್ ಫೌಂಡೇಷನ್ ಯೋಜನೆಯಡಿ ಈವರೆಗೆ ರಾಜ್ಯ ಸರ್ಕಾರ (ಜವಳಿ ಇಲಾಖೆ) ಮ್ಯಾಚಿಂಗ್ ಗ್ರಾ ೃಂಟ್ ಒದಗಿಸಿರುವುದಿಲ್ಲ.

ಯೋಜನೆಯು ಪ್ರಾರಂಭಿಸಿದಂದಿನಿಂದ ಅಂದರೆ ಎಪ್ರಿಲ್ 2000 ದಿಂದ ಈವರೆಗೆ 456.84 ಲಕ್ಷಗಳನ್ನು ದೀನ್ ದಯಾಳ್ ಹತ್ ಕರ್ಗಾ ಪ್ರೋತ್ಸಾಹನ ಯೋಜನೆಯಡಿ ರಾಜ್ಯದ ಪಾಲಾಗಿ ಕೈಮಗ್ಗ ವಲಯಕ್ಕೆ ಬಿಡುಗಡೆ ಮಾಡಿರುತ್ತದೆ.

ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕಿನ ಪ್ರಾರ್ಥನಾ ಮಂದಿರಗಳ ನವೀಕರಣಕ್ಕೆ ಹಣ ಬಿಡುಗಡೆ

1068 (1346) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪ್ರಸಕ್ತ ಸಾಲಿನಲ್ಲಿ ಪ್ರಾರ್ಥನಾ ಮಂದಿರಗಳ ನವೀಕರಣಕ್ಕೆ ನಿಗಧಿಪಡಿಸಿದ ಮೊತ್ತ ಎಷ್ಟು ಇದುವರೆವಿಗೆ ವ್ಯಯ ಮಾಡಿದ ಮೊತ್ತ ಎಷ್ಟು ?

ಆ) ತೀರ್ಥಹಳ್ಳಿ ಮತ್ತು ಹೊಸನಗರ ತಾಲ್ಲೂಕಿನ ಪ್ರಾರ್ಥನಾ ಮಂದಿರಗಳ ವಕ್ಫ್ ಮಂಡಳಿಗೆ ಸಲ್ಲಿಸಿರುವ ಪ್ರಸ್ತಾವನೆ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಎಂ.ಎಲ್. ಉಸ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು) :

ಅ) ಪ್ರಸಕ್ತ ಸಾಲಿನಲ್ಲಿ ಆಯ್ಯವ್ಯಯದಲ್ಲಿ ಮಸೀದಿ, ದರ್ಗಾ, ಅರಬ್ಬಿ ಮದ್ರೆಸಾ ಮತ್ತು ಇತರೆ ವಕ್ಫ್ ಸಂಸ್ಥೆಗಳ ನವೀಕರಣ ಮತ್ತು ದುರಸ್ತಿಗಾಗಿ ರೂ. 500.00 ಲಕ್ಷ ಒದಗಿಸಿದ್ದು, ಇದುವರೆವಿಗೆ ರೂ. 275.00 ಲಕ್ಷ ವ್ಯಯ ಮಾಡಲಾಗಿದೆ.

ಆ) ಇಂಥ ಪ್ರಸ್ತಾವನೆ ಕರ್ನಾಟಕ ವಕ್ಫ್ ಬೋರ್ಡ್‌ಗೆ ಸಲ್ಲಿಸಿದ ನಂತರ ನಿಯಮಾನುಸಾರ ಮತ್ತು ಹಣದ ಲಭ್ಯತೆ ಅನುಸಾರ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಹಸು ಭ್ರೂಣ ವರ್ಗಾವಣೆ ತಂತ್ರಜ್ಞಾನಕ್ಕೆ ನೆರವು

1069 (1347) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಪಸುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಸು ಭ್ರೂಣ ವರ್ಗಾವಣೆ ತಂತ್ರಜ್ಞಾನವನ್ನು ರಾಜ್ಯದಲ್ಲಿ ಅಭಿವೃದ್ಧಿಪಡಿಸಲಾಗಿದೆಯೇ ; ಈ ತಂತ್ರಜ್ಞಾನ ಈಗ ಯಾವ ಹಂತದಲ್ಲಿದೆ ?

ಆ) ರಾಜ್ಯ ಸರ್ಕಾರ ಈ ತಂತ್ರಜ್ಞಾನಕ್ಕೆ ನೀಡಿರುವ ಧನ ಸಹಾಯ ಎಷ್ಟು ; (ವರ್ಷವಾರು ಮಾಹಿತಿ ನೀಡುವುದು) ?

ಇ) ಸರ್ಕಾರದ ನೀರಸ ಬೆಂಬಲದಿಂದಾಗಿ ಹಸು ಭ್ರೂಣ ವರ್ಗಾವಣೆ ತಂತ್ರಜ್ಞಾನವು ತೆರೆ ಮೆರೆಗೆ ಸರಿಯುವ ಹಂತಕ್ಕೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಈ) ಹಸು ಭ್ರೂಣ ವರ್ಗಾವಣೆ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸುವಲ್ಲಿ ಸರ್ಕಾರದ ನಿಲುವೇನು ; ಮತ್ತು ಸರ್ಕಾರ ನೀಡುವ ಸಹಾಯ ಧನ ಎಷ್ಟು ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಹಸು ಭ್ರೂಣ ವರ್ಗಾವಣೆ ತಂತ್ರಜ್ಞಾನವನ್ನು ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯ, ಬೆಂಗಳೂರು ಇಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಇದು ಮುನ್ನಡೆಯ ಹಂತದಲ್ಲಿದೆ.